ಕರ್ನಾಟಕ ಸರ್ಕಾರ
( ಕಂದಾಯ ಇಲಾಖೆ )
**ತಾಲೂಕು ಕಚೇರಿ, ಮಂಗಳೂರು**

ಕಚೇರಿ : 0824 - 2220587
ಫ್ಯಾಕ್ಸ್ 0824 -2410953
Email: tah.mnglr@gmail.com

ನಂಬ್ರ ಟಿಟಿಆರ್/ಸಿಆರ್/315/09-10

ತಾಲೂಕು ಕಛೇರಿ, ಮಂಗಳೂರು,
ದಿನಾಂಕ:09-09-2010.

## ಅಧಿಕೃತ ಜ್ಞಾಪನಾ

ವಿಷಯ: ತಾಲೂಕು ವ್ಯಾಪ್ತಿಯಲ್ಲಿರುವ ಸರಕಾರಿ ಜಮೀನುಗಳನ್ನು ಸಂರಕ್ಷಿಸಲು ತಾಲೂಕು ಮಟ್ಟದ ಪ್ರಾಧಿಕಾರಕ್ಕೆ ಸದಸ್ಯರನ್ನು ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: 1.ಸರಕಾರಿ ಆದೇಶ ಸಂಖ್ಯೆ ಸಕಂಇ/ಎಲ್ ಜಿಕ್ಯೂ99(ಪಿ1) ಬೆಂಗಳೂರು ದಿನಾಂಕ: 13-11-2008.

2. ಮಾನ್ಯ ಜಿಲ್ಲಾಧಿಕಾರಿಯವರು ಕಂದಾಯಾಧಿಕಾರಿಗಳ ಸಭೆಯಲ್ಲಿ ನೀಡಿದ ನಿರ್ದೇಶನ.

------------

ಸರಕಾರಿ ಜಮೀನುಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಸ್ವಾಧೀನದಲ್ಲಿಟ್ಟುಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದ್ದು ಸರಕಾರಿ ಜಮೀನುಗಳನ್ನು ಸಂರಕ್ಷಿಸಿ ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಟ್ಟು ಮುಂದಿನ ಪೀಳಿಗೆಯವರಿಗೂ ಲಭ್ಯವಾಗುವ ರೀತಿಯಲ್ಲಿ ಕಾಪಾಡುವ ಉದ್ದೇಶಗಳಿಗೆ ಮೀಸಲಿಟ್ಟು ಮುಂದಿನ ಪೀಳಿಗೆಯವರಿಗೂ ಲಭ್ಯವಾಗುವ ರೀತಿಯಲ್ಲಿ ಕಾಪಾಡುವ ಉದ್ದೇಶದಿಂದ ರಾಜ್ಯಮಟ್ಟದಲ್ಲಿ ಸರಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ ರಚನೆಯಾಗಿರುವಂತೆ ಜಿಲ್ಲಾಮಟ್ಟದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪ್ರಾಧೀಕಾರ ಹಾಗೂ ತಾಲೂಕುಲ ಮಟ್ಟದಲ್ಲಿ ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಪ್ರಮುಖ ಇಲಾಖೆಗಳ ಪ್ರತಿನಿಧಿಗಳನ್ನು ಸದಸ್ಯರನ್ನಾಗಿಸಿ ತಾಲೂಕು ಮಟ್ಟದ ಪ್ರಾಧಿಕಾರ ರಚಿಸಲು ಉಲ್ಲೇಖ(1) ರಂತೆ ಸರಕಾರದ ಆದೇಶವಾಗಿದ್ದು ಅಂತೆಯೇ ಹೆಚ್ಚಿನ ಸರಕಾರಿ ಜಮೀನನ್ನು ತಮ್ಮ ಇಲಾಖೆಗಳ ಸುಪರ್ದಿಯಲ್ಲಿ ಸ್ವಾಧೀನದಲ್ಲಿ ವಿವಿಧ ಯೋಜನೆ/ಕಾರ್ಯಗಳಿಗೆ ಬಳಸಿಕೊಳ್ಳುತ್ತಿರುವ ಈ ಕೆಳಕಂಡ ಇಲಾಖೆಯ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡಿದೆ.

1. ಮಾನ್ಯ ಕಾರ್ಯನಿರ್ವಹಣಾಧಿಕಾರಿ ತಾಲೂಕು ಪಂಚಾಯತ್ (ಎಲ್ಲಾ ಗ್ರಾಮಪಂಚಾಯತ್‌ಗಳ ಪರವಾಗಿ)
2. ವಲಯ ಅರಣ್ಯಾಧಿಕಾರಿಗಳು (ಮಂಗಳೂರು,ವೇಣೂರು,ಬಂಟ್ವಾಳ ವಲಯಗಳು)
3. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ.
4. ಕ್ಷೇತ್ರ ಶಿಕ್ಷಣಾಧಿಕಾರಿ (ಮಂಗಳೂರು ನಗರ ಹಗೂ ಮಂಗಳೂರು ಗ್ರಾಮಾಂತರ).
5. ತಾಲೂಕು ಆರೋಗ್ಯಾಧಿಕಾರಿ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಒಳನಾಡು ಜಲಸಾರಿಗೆ ಮತ್ತು ಬಂದರು ಇಲಾಖೆ.

8.ಉಪ ತಹಶೀಲ್ದಾರರು, ಕಂದಾಯ ಶಾಖೆ, ತಾಲೂಕು ಕಚೇರಿ, ಮಂಗಳೂರು **ಸದಸ್ಯ ಕಾರ್ಯದರ್ಶಿ.**

ಈ ಮೇಲ್ಕಂಡ 7 ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಅಂದರೆ ಕಚೇರಿ ಮುಖ್ಯಸ್ಥರುಗಳನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಕ ಮಾಡಿದೆ. ಸದ್ರಿ ಅಧಿಕಾರಿಗಳು ಪ್ರತಿ ತಿಂಗಳಿಗೊಮ್ಮೆ ನಡೆಯುವ ಪ್ರಾಧಿಕಾರದ ಸಭೆಗೆ ಖುದ್ದು ಹಾಜರಾಗುವುದು ಮತ್ತು ಪ್ರಾಧಿಕಾರದ ನಡವಳಿಯನ್ನು ಪರಿಗಣಿಸಿಕೊಂಡು ಸರಕಾರಿ ಜಮೀನುಗಳ ಸಂರಕ್ಷಣೆಗೆ ಸೂಕ್ತ ಕಾರ್ಯಕ್ರಮ ರೂಪಿಸುವುದು. ತಾಲೂಕು ಮಟ್ಟದ ಪ್ರಾಧಿಕಾರದ ಕರ್ತವ್ಯಗಳು (ಉಲ್ಲೇಖದ ಆದೇಶದಲ್ಲಿ ನಿರ್ದೇಶಿಸಿದಂತೆ).

1. ಸರ್ಕಾರಿ ಭೂಮಿಯ ಒತ್ತುವರಿಯ ಪತ್ತೆ ಹಚ್ಚುವುದು.
2. ಸರಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿ ಒಪ್ಪಿಸುವುದು.
3. ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಾಲಂ 192(ಎ) ರಡಿ ಸರಕಾರಿ ಜಮೀನು ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲು ಮಾಡುವುದು.

(signature) 9/9/2010

ತಹಶೀಲ್ದಾರರು

ಮಂಗಳೂರು ತಾಲೂಕು.